**ಓ ಎಸ್ ನಂಃ 138-17**
**ಪಿ ಡಬ್ಲ್ಯೂ ಃ 1**

**ದಿಃ 02-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ಜಿ ವಕೀಲರಿಂದ**

ತಿಮ್ಮರಾಯಗೌಡರವರಿಗೆ ತಿಮ್ಮರಾಯಪ್ಪರವರ ಹೆಂಡತಿಯಾದ ನಂಜಮ್ಮರವರಿಂದ ಎಷ್ಟು ಆಸ್ತಿಗಳು ಬಂದಿರುತ್ತವೆ ಎಂಬುದನ್ನು ನಾನು ದಾಖಲೆಗಳನ್ನು ನೋಡಿ ಹೇಳಬಹುದು. ಪುಟ್ಟತಿಮ್ಮರಾಯಗೌಡರವರ ಹೆಸರಿಗೆ 5 ಎಕರೆ ಜಮೀನು ಬಂದಿರುತ್ತದೆ. ಅವರಿಗೆ ಬಂದ ಆಸ್ತಿಯ ಸರ್ವೆ ನಂ 62/1 ಇರುತ್ತದೆ. ಈ ಆಸ್ತಿಯ ಉತ್ತರಕ್ಕೆ ಅರಣ್ಯ ಮತ್ತು ಕೆ ಟಿ ವಿಶ್ವನಾಥ್ ರವರ ಆಸ್ತಿ ಇದೆ, ದಕ್ಷಿಣಕ್ಕೆ ವಿಭಾಗದ ಪತ್ರದ ಪ್ರಕಾರ ನಂಜಮ್ಮರವರ ಆಸ್ತಿ ಇದೆ, ಪೂರ್ವಕ್ಕೆ ಸರ್ವೆ ನಂ 63 ಮುನಿಸ್ವಾಮಪ್ಪರವರ ಆಸ್ತಿ ಇದೆ, ಪಶ್ಚಿಮಕ್ಕೆ ಕೆ ಟಿ ವಿಶ್ವನಾಥ್ ರವರ ಆಸ್ತಿ ಇದೆ. ಪುಟ್ಟತಿಮ್ಮರಾಯಗೌಡರವರಿಗೆ 4 ಎಕರೆ ಮತ್ತು 1 ಎಕರೆ ಜಮೀನು ಬೇರೆ ಬೇರೆಯಾಗಿ ಬಂದಿದ್ದು 1 ಎಕರೆ ಆಸ್ತಿಗೆ ಬೇರೆ ಚಕ್ಕುಬಂದಿ ಇರುತ್ತದೆ. ನನ್ನ ತಂದೆ ಹಾಗೂ ಅವರ ಸಹೋದರರು 1969-70 ರಲ್ಲಿ ವಿಭಾಗ ಆಗಿರುತ್ತಾರೆ. ಅವರು ಯಾವ ದಿನಾಂಕ ವಿಭಾಗ ಆಗಿರುತ್ತಾರೆ ದಾಖಲೆಗಳನ್ನು ನೋಡಿ ಹೇಳಬಹುದು. ಯಾವ ಉದ್ದೇಶಕ್ಕಾಗಿ ನನ್ನ ಅಜ್ಜಿ ಮತ್ತು ನನ್ನ ತಂದೆ ಆಸ್ತಿಗಳನ್ನು ಅದಲು ಬದಲು ಮಾಡಿಕೊಂಡಿರುತ್ತಾರೆ ಎಂದರೆ ನನ್ನ ಅಜ್ಜಿ ಆಸ್ತಿಯನ್ನು ನನ್ನ ತಂದೆಗೆ ಕೇಳಿದ್ದು ಆ ಕಾರಣಕ್ಕಾಗಿ ನಾವು ಅವರಿಂದ 5 ಎಕರೆ ಪಡೆದು ನನ್ನ ಅಜ್ಜಿಗೆ 6 ಎಕರೆ ಜಮೀನನ್ನು ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ಕೆ ಟಿ ವಿಜಯಕುಮಾರ್ ರವರಿಗೆ ವಿಭಾಗದಲ್ಲಿ 6 ಎಕರೆ 10 ಗುಂಟೆ ಜಮೀನು ಬಂದಿರುತ್ತದೆ. ಈ ಆಸ್ತಿಗೆ ಚಕ್ಕುಬಂದಿಯನ್ನು ನಾನು ದಾಖಲೆ ನೋಡಿ ಹೇಳಬಹುದು. ಕೆ ಟಿ ವಿಜಯಕುಮಾರ್ ರವರಿಗೆ ಭಾಗ ಸರ್ವೆ ನಂ 62/1 ರಲ್ಲಿ ಮತ್ತು ಸರ್ವೆ ನಂ 47/1 ರಲ್ಲಿ ಜಮೀನು ಬಂದಿದ್ದು ಸರ್ವೆ ನಂ 62/1 ರಲ್ಲಿ ಎಷ್ಟು ಜಮೀನು ಬಂದಿರುತ್ತದೆ ದಾಖಲೆ ನೋಡಿ ಹೇಳಬಹುದು. ಅದಲು ಬದಲು ಆದ ಜಮೀನಿನ ಚಕ್ಕುಬಂದಿಯನ್ನು ನಾನು ದಾಖಲೆ ನೋಡಿ ಹೇಳಬಹುದು ಆದರೆ ಅದಲು ಬದಲಿನಲ್ಲಿ ನಮಗೆ ಬಂದ ಜಮೀನಿನ ಚಕ್ಕುಬಂದಿಯನ್ನು ಈಗ ಹೇಳಬಹುದು. ಸರ್ವೆ ನಂ 47/1 ರಲ್ಲಿ ಎಷ್ಟು ಆಸ್ತಿ ಕೆ ಟಿ ವಿಜಯಕುಮಾರ್ ರವರಿಗೆ ಬಂದಿರುತ್ತದೆ ಮತ್ತು ಅದರ ಚಕ್ಕುಬಂದಿಯನ್ನು ನಾನು ದಾಖಲೆ ನೋಡಿ ಹೇಳಬಹುದು.

ವಾದಿಗೆ ಬಂದ ಜಮೀನು ಮೂಲತಃ ದುಡುಪನಹಳ್ಳಿ ಬಾಚೇನಹಟ್ಟಿ ಗ್ರಾಮಕ್ಕೆ ಸೇರಿದ್ದಾಗಿರುತ್ತದೆ.

ಸಾಕ್ಷಿ ಮುಂದುವರೆದು ಆ ಆಸ್ತಿಗಳು ಬಾಚೇನಹಟ್ಟಿ ಗ್ರಾಮದಲ್ಲಿ ಬರುತ್ತವೆ ಎಂದು ಹೇಳುತ್ತಾರೆ. ನನ್ನ ತಂದೆ ಸಾಕ್ಷಿ ಹೇಳಲು ಬಂದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ನಾನು ಮುಕ್ತರುನಾಮೆ ಪಡೆದು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ 62 ಮೂಲತಃ ಯಾರ ಹೆಸರಿನಲ್ಲಿತ್ತು ನಾನು ದಾಖಲೆ ನೋಡಿ ಹೇಳಬಹುದು. ಸರ್ವೆ ನಂ 62 ರಲ್ಲಿ ಎಷ್ಟು ಪೋಡಿಯಾಗಿರುತ್ತದೆ ನಾನು ಪಹಣಿಯನ್ನು ನೋಡಿ ಹೇಳಬಹುದು. ಸರ್ವೆ ನಂ 62 ರಲ್ಲಿ ಎಷ್ಟು ವಿಸ್ತೀರ್ಣದ ಪೋಡಿಗಳು ಆಗಿರುತ್ತವೆ ಮತ್ತು ಯಾರ್ಯಾರ ಹೆಸರಿಗೆ ಆಗಿರುತ್ತದೆ ಎಂದು ದಾಖಲೆಗಳನ್ನು ನೋಡಿ ಹೇಳಬಹುದು. ಪೋಡಿಯಾದ ಸರ್ವೆ ನಂ ಬೇರೆಯವರ ಆಸ್ತಿಗಳ ಚಕ್ಕುಬಂದಿ ಗೊತ್ತಿಲ್ಲ ನನಗೆ ಸಂಬಂಧಿಸಿದ ಪೋಡಿಯಾದ ಸರ್ವೆ ನಂಬರ್ ಚಕ್ಕುಬಂದಿಯನ್ನು ಹೇಳಬಹುದು.

ಸರ್ವೆ ನಂ 62/5 2016 ರಲ್ಲಿ ಆಗಿರುತ್ತದೆ. ವಿಭಾಗ ಪತ್ರ ಸರೋಜಮ್ಮ ಗಂಡ ಪುಟ್ಟತಿಮ್ಮರಾಯಗೌಡ, ಕೆ ಟಿ ರಾಧಾಕೃಷ್ಣ, ಕೆ ಟಿ ವಿಶ್ವನಾಥ್, ವಾದಿ ಮತ್ತು ಅಜ್ಜಿಯಾದ ನಂಜಮ್ಮರವರುಗಳ ಮದ್ಯೆ ಆಗಿರುತ್ತದೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**